# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | ಶ್ರೀ ಯು.ಬಿ.ವೆಂಕಟೇಶ್ |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 03 |
| ಉತ್ತರಿಸಬೇಕಾದ ದಿನಾಂಕ | : 15-02-2022 |
| ಉತ್ತರಿಸಬೇಕಾದ ಸಚಿವರು | ಸಹಕಾರ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ನಗರದಲ್ಲಿರುವ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಮತ್ತು ವಶಿಷ್ಟ ಸೌಹಾರ್ದ ಸಹಕಾರ ಬ್ಯಾಂಕ್ ನಿಯಮಿತದಲ್ಲಿ ಠೇವಣಿದಾರರಿಗೆ ವಂಚನೆಯಾಗಿರುವ ಬಗ್ಗೆ ಸರ್ಕಾರ ಈವರೆಗೆ ಕೈಗೊಂಡಿರುವ ಕ್ರಮಗಳೇನು; | <u>**ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿ., ಬೆಂಗಳೂರು**</u><br>ಇಲ್ಲಿ ಠೇವಣಿದಾರರಿಗೆ ವಂಚನೆಯಾಗಿರುವ ಸಂಬಂಧ ಸರ್ಕಾರ ಇದುವರೆವಿಗೂ ತೆಗೆದುಕೊಂಡಿರುವ ಕ್ರಮಗಳ ವಿವರ ಕೆಳಕಂಡಂತಿದೆ:<br>1. ಪ್ರಕರಣವನ್ನು ಸಿಐಡಿ ತನಿಖೆಗೆ ಆದೇಶಿಸಲಾಗಿದೆ.<br>2. ಬ್ಯಾಂಕಿನ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ ಭಾರತೀಯ ರಿಸರ್ವ್ ಬ್ಯಾಂಕಿನ ಸಲಹೆ ಮೇರೆಗೆ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದ ನಿರ್ದೇಶನದ ಪ್ರಕಾರ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವ ಕೆನರಾ ಬ್ಯಾಂಕಿನ ನಿವೃತ್ತ ಜನರಲ್ ಮ್ಯಾನೇಜರ್ ಆಗಿದ್ದ ಶ್ರೀ ಆರ್. ಅಶೋಕನ್ ಎಂಬುವವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ.<br>3. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 64 ರ ವಿಚಾರಣೆಗೆ ಆದೇಶಿಸಲಾಗಿದೆ.<br>4. 2014-15 ರಿಂದ 2018-19 ರವರೆಗಿನ ಲೆಕ್ಕಪತ್ರಗಳನ್ನು ಮರುಲೆಕ್ಕಪರಿಶೋಧನೆಗೆ ಆದೇಶಿಸಲಾಗಿದೆ.<br>5. ಜಾರಿ ನಿರ್ದೇಶನಾಲಯ ಸ್ಥಿರಾಸ್ತಿಯನ್ನು ಮುಟ್ಟುಗೋಲು ಹಾಕಿರುತ್ತದೆ.<br>6. ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗಿದೆ. ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.<br><u>**ಶ್ರೀ ವಸಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಂಗಳೂರು**</u><br>ಈ ಸಹಕಾರಿಯಲ್ಲಿ ಠೇವಣಿದಾರರಿಗೆ ವಂಚನೆಯಾಗಿರುವ ಬಗ್ಗೆ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ. |

| | | |
|---|---|---|
| | | 1) ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರುಗಳನ್ನು ಅನರ್ಹಗೊಳಿಸಿ, ವಿಶೇಷಾಧಿಕಾರಿ ನೇಮಿಸಲಾಗಿದೆ.<br>2) ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಪ್ರಕರಣ 35 ರಡಿ ಶಾಸನಬದ್ಧ ವಿಚಾರಣೆಗೆ ಆದೇಶಿಸಲಾಗಿದ್ದು, ವಿಚಾರಣೆ ಮುಕ್ತಾಯ ಹಂತದಲ್ಲಿರುತ್ತದೆ.<br>3) ಸರ್ಕಾರವು ದಿ:24-11-2021 ರ ಆದೇಶದಲ್ಲಿ 2013-14 ಮತ್ತು 2014-15 ನೇ ಸಾಲಿನ ಲೆಕ್ಕಪತ್ರಗಳನ್ನು ಮರು ಲೆಕ್ಕಪರಿಶೋಧನೆಗೆ ಆದೇಶಿಸಿರುತ್ತದೆ.<br>4) 2015-16 ರಿಂದ ನಂತರದ ಅವಧಿಗೆ ಲೆಕ್ಕಪರಿಶೋಧನಾ ವರದಿಗಳನ್ನು ಮರು ಲೆಕ್ಕಪರಿಶೋಧನೆಗೆ ಒಳಪಡಿಸಲು ಲೆಕ್ಕಪರಿಶೋಧನಾ ನಿರ್ದೇಶಕರು ಕ್ರಮವಿಟ್ಟಿರುತ್ತಾರೆ. |
| (ಆ) | ಸದರಿ ಅವ್ಯವಹಾರ ಪ್ರಕರಣ ಸಂಬಂಧ ಸರ್ಕಾರವು ದಾಖಲಿಸಿರುವ ಪ್ರಕರಣಗಳ ಸಂಖ್ಯೆ ಎಷ್ಟು ; | <u>**ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿ.,**</u> ಇಲ್ಲಿ ಅವ್ಯವಹಾರ ಎಸಗಿದ 19 ಸಿಬ್ಬಂದಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಿ ಸೇವೆಯಿಂದ ವಜಾಗೊಳಿಸಲಾಗಿದೆ. ಈ ಪೈಕಿ 15 ಸಿಬ್ಬಂದಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಸಿಐಡಿ ಆಡಳಿತಾಧಿಕಾರಿಗಳು ದೂರು ಸಲ್ಲಿಸಿರುತ್ತಾರೆ.<br>ಸದರಿ ಬ್ಯಾಂಕಿನ ಅವ್ಯವಹಾರದ ಬಗ್ಗೆ ಬಸವನಗುಡಿ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 37/2020 ಕಲಂ 406, 409, 420, 120(ಬಿ), ರೆ/ವಿ 34 ಐ.ಪಿ.ಸಿ. ರೀತ್ಯ ಪ್ರಕರಣ ದಾಖಲಾಗಿ ಸಿಐಡಿಯಲ್ಲಿ ತನಿಖೆಯಲ್ಲಿರುತ್ತದೆ.<br><u>**ಶ್ರೀ ವಸಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,**</u><br>ಶಾಸನಬದ್ಧ ವಿಚಾರಣಾ ವರದಿ ಹಾಗೂ ಮರುಲೆಕ್ಕಪರಿಶೋಧನೆ ವರದಿ ಸ್ವೀಕೃತವಾದ ನಂತರ ಅವ್ಯವಹಾರ ಎಸಗಿರುವವರ ವಿರುದ್ಧ ನಿಯಮಾನುಸಾರ ಕ್ರಮವಿಡಲಾಗುವುದು. |
| (ಇ) | ಸದರಿ ಬ್ಯಾಂಕ್‌ಗಳಲ್ಲಿರುವ ಒಟ್ಟು ಸದಸ್ಯರ ಸಂಖ್ಯೆ ಎಷ್ಟು; ಅವರುಗಳಲ್ಲಿ ಠೇವಣಿಯಿರಿಸಿರುವವರ ಸಂಖ್ಯೆ ಎಷ್ಟು; ವಂಚನೆಗೊಳಗಾಗಿರುವವರ ಸಂಖ್ಯೆ ಎಷ್ಟು; ವಂಚನೆಗೊಳಗಾಗಿರುವವರ ಹಿತರಕ್ಷಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? | <u>**ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿ.,**</u> ಇಲ್ಲಿ ಒಟ್ಟು 9057 ಸದಸ್ಯರಿದ್ದು, ಈ ಸದಸ್ಯರ ಪೈಕಿ 6719 ಸದಸ್ಯರು ಠೇವಣಿ ಮಾಡಿರುತ್ತಾರೆ. ಈ ಎಲ್ಲಾ 6719 ಠೇವಣಿದಾರರು ವಂಚನೆಗೆ ಒಳಗಾಗಿರುತ್ತಾರೆ. ಇದಲ್ಲದೆ, ಹೂಡಿಕೆ ಮಾಡಿದ್ದ ಇತರೆ ಠೇವಣಿದಾರರು ವಂಚನೆಗೆ ಒಳಗಾಗಿದ್ದು, ಒಟ್ಟಾರೆ ವಂಚನೆಗೆ ಒಳಗಾದವರ ಸಂಖ್ಯೆ: 41778 ಆಗಿದೆ.<br>ಬ್ಯಾಂಕಿನಲ್ಲಿ ಹೂಡಿಕೆ ಮಾಡಿದ್ದ ಠೇವಣಿದಾರರಿಗೆ ಡಿಐಸಿಜಿಸಿ ವಿಮಾ ಸಂಸ್ಥೆಯು ಇದುವರೆವಿಗೂ ರೂ.709.99 ಕೋಟಿ ಹಣವನ್ನು ಬಿಡುಗಡೆ ಮಾಡಿರುತ್ತದೆ. ಈ ಹಣವನ್ನು ಠೇವಣಿದಾರರಿಗೆ ಪಾವತಿಸಲಾಗಿದೆ. |

| | | |
|---|---|---|
| | | ಬ್ಯಾಂಕ್ ತನ್ನ ಸ್ವಂತ ನಿಧಿಯಿಂದ 42597 ಠೇವಣಿದಾರರಿಗೆ (ರೂ.1.00 ಲಕ್ಷದವರೆಗೆ ಹಾಗೂ ವೈದ್ಯಕೀಯ ವೆಚ್ಚ) ರೂ.233.49 ಕೋಟಿ ಹಣ ಪಾವತಿಸಿರುತ್ತದೆ.<br><br>ದಿ:10-01-2020 ರಿಂದ ಇದುವರೆವಿಗೂ ರೂ.188.44 ಕೋಟಿ ಸಾಲ ವಸೂಲಿ ಮಾಡಲಾಗಿದೆ.<br><br>ಪ್ರಸ್ತುತ 8918 ಠೇವಣಿದಾರಿಗೆ ರೂ.1624.81 ಕೋಟಿ ಹಣ ಪಾವತಿಸಬೇಕಾಗಿದೆ.<br><br>ಬ್ಯಾಂಕ್‌ನ್ನು ಪುನ:ಶ್ಚೇತನಗೊಳಿಸಲು ಸರ್ಕಾರ, ಸಹಕಾರ ಇಲಾಖೆ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಕಾಲಕಾಲಕ್ಕೆ ಸಭೆಗಳನ್ನು ನಡೆಸಿ ಪರಾಮರ್ಶಿಸಲಾಗುತ್ತಿದೆ.<br><br>**ಶ್ರೀ ವಸಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಂಗಳೂರು**<br>ಸಹಕಾರಿಯಲ್ಲಿ ಒಟ್ಟು 5165 ಸದಸ್ಯರುಗಳಿದ್ದು, ಒಟ್ಟು ಠೇವಣಿ ಪ್ರಕರಣಗಳು 12645 ರಲ್ಲಿ ಠೇವಣಿ ಮೊತ್ತ ರೂ.291.49 ಕೋಟಿಯಾಗಿರುತ್ತದೆ.<br><br>**ಕ್ರಮಗಳು:**<br>729 ಠೇವಣಿ ಖಾತೆ ಮುಕ್ತಾಯಗೊಳಿಸಿ, ರೂ.26.87 ಕೋಟಿ ಠೇವಣಿ ಮರುಪಾವತಿಸಲಾಗಿದೆ.<br><br>ಸಾಲ ವಸೂಲಾತಿ ಮಾಡಿ, ಹಂತ ಹಂತವಾಗಿ ಠೇವಣಿದಾರರಿಗೆ ಠೇವಣಿ ಮೊತ್ತ ಹಿಂಪಾವತಿಗೆ ಕ್ರಮವಿಡಲಾಗುತ್ತಿದೆ. |

**ಕಡತ ಸಂಖ್ಯೆ ಸಿಒ 09 ಸಿಆರ್‌ಸಿ 2022**

**(ಎಸ್. ಟಿ. ಸೋಮಶೇಖರ್)**
ಸಹಕಾರ ಸಚಿವರು